ತುರುವೇಕೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯ

401(459) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)(ತುರುವೇಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತುರುವೇಕೆರೆ ತಾಲ್ಲೂಕು ಬಾಣಸಂದ್ರ ಮಾಯಸಂದ್ರ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಜನಾಂಗ ಜಾಸ್ತಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಪರಿಶಿಷ್ಟ ಜಾತಿ/ಪರಿಶಿಷ್ಟ ಜನಾಂಗದ ಮಕ್ಕಳು ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಈ ಗ್ರಾಮಗಳಿಗೆ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಜಿಲ್ಲಾ ಪಂಚಾಯತ್ ಈಗಾಗಲೇ ಶಿಫಾರಸ್ಸು ಮಾಡಿದ್ದರೂ ಸರ್ಕಾರ ನಿಧಾನ ಮಾಡುತ್ತಿರಲು ಕಾರಣವೇನು?

3. ಈ ವರ್ಷದ ಆಯವ್ಯಯದಲ್ಲಿ ಮಂಜೂರು ಮಾಡಲಾಗುವುದೇ?

4. ಬಾಣಸಂದ್ರಕ್ಕೆ ವಿದ್ಯಾರ್ಥಿನಿಲಯ, ಮಾಯಸಂದ್ರಕ್ಕೆ ಬಾಲಕಿಯರ ವಿದ್ಯಾರ್ಥಿನಿಲಯ ಈ ವರ್ಷ ಮಂಜೂರು ಮಾಡಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1. ಹೌದು

2. ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲ.

3. ಅನ್ವಯಿಸುವುದಿಲ್ಲ

4. ಅನ್ವಯಿಸುವುದಿಲ್ಲ

ಗುಬ್ಬಿ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆ (KHDC) ಕುರಿತು

403(461) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ(ತುರುವೇಕೆರೆ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗುಬ್ಬಿ ತಾಲ್ಲೂಕು ಕಲ್ಲೂರು ಗ್ರಾಮದಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆ ಯಾವಾಗ ಪ್ರಾರಂಭವಾಯಿತು?

ಆ. ಪ್ರಾರಂಭದಿಂದಲೂ ಈ ಶಾಖೆ ಚೆನ್ನಾಗಿ ವ್ಯಾಪಾರ ವಹಿವಾಟು ಮಾಡುತ್ತಿದ್ದು, ಈ ಶಾಖೆಯನ್ನು ಮುಚ್ಚಲು ಸರ್ಕಾರ ಯೋಚಿಸಿದೆಯೇ?

ಇ. ಹಾಗಿದ್ದಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಅತ್ಯುತ್ತಮವಾಗಿ ನಡೆಯುತ್ತಿರುವ ಶಾಖೆಯನ್ನು ಮುಚ್ಚಲು ಕಾರಣವೇನು?

ಈ. ರೈತರು ಅಪೇಕ್ಷಿಸಿರುವ ಶಾಖೆಯನ್ನು ಮುಚ್ಚದೇ ಮುಂದುವರಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು)

ಅ. ದಿನಾಂಕ: 14-10-1986 ರಂದು ಪ್ರಾರಂಭವಾಯಿತು.

ಆ. ಹೌದು, ಕೆಳಗೆ ಸೂಚಿಸಿರುವಂತೆ ಕಳೆದು ಕೆಲವು ವರ್ಷಗಳಿಂದ ಕಲ್ಲೂರು ಪ್ರಿಯದರ್ಶಿನಿ ಮಾರಾಟ ಮಳಿಗೆಯ ವಹಿವಾಟು ನಷ್ಟಕರವಾಗಿದ್ದು, ಈ ಆಧಾರದ ಮೇಲೆ ಮಾರಾಟ ಮಳಿಗೆಯನ್ನು ಮುಚ್ಚಲು ತೀರ್ಮಾನಿಸಲಾಗಿದೆ.